ಮಹೋತ್ಸವದ ಕಥಾಂಶವನ್ನು ಜೋಡಿ ಬಸವರ ಮೂಲಕ ಆಡಿಸಲಾಗುವುದು. ಆಟ ಆಡಿಸುವಾತನಿಗೆ ಸ್ವಲ್ಪಮಟ್ಟಿಗೆ ಕಣಿ ಅಥವಾ ಜ್ಯೋತಿಷ ಹೇಳುವುದು ಗೊತ್ತಿರುತ್ತದೆ. ಸೀತೆ ಹಾಗೂ ರಾಮರ ಕಡೆ ಒಬ್ಬೊಬ್ಬರು ನಿಂತು ಲಗ್ನ ಮಾಡಿಸುವಾಗ ಅವರಲ್ಲಿ ನಡೆಯುವ ಸಂಭಾಷಣೆ, ಏರ್ಪಡುವ ಸನ್ನಿವೇಶಗಳು ತುಂಬಾ ವಿನೋದವಾಗಿರುತ್ತವೆ. ಸಾಮಾನ್ಯವಾಗಿ ಕೋಲೆಬಸವ ಆಡಿಸುವವರು ಕಡುಬಡವರು. ವಂಶಪಾರಂಪರ್ಯವಾಗಿ ತಮ್ಮ ಈ ಕಸುಬನ್ನು ಅವರು ಮುಂದುವರಿಸಿಕೊಂಡು ಬಂದವರಾಗಿರುತ್ತಾರೆ. ಮನೆಮಠ ಇದ್ದರೂ ಅವರಿಗೆ ಅದರ ಕಡೆ ಲಕ್ಷ್ಯವಿರುವುದಿಲ್ಲ. ವರ್ಷವೆಲ್ಲ ಊರಿಂದ ಊರಿಗೆ ವಲಸೆ ಹೋಗಿ ಅಲೆಮಾರಿಗಳಂತೆ ಕೋಲೆ ಬಸವನನ್ನು ಆಡಿಸಿ ಅದರಿಂದ ಬಂದ ಹಣದಲ್ಲಿ ಜೀವನ ಸಾಗಿಸುವುದೇ ಇವರಿಗೆ ಪ್ರಿಯ ಕಾಯಕವಾಗಿದೆ. ಸಾರ್ವಜನಿಕವಾಗಿ ಸಂತೆಯಲ್ಲಿ ಅಥವಾ ಮನೆ ಮನೆಗೆ ತೆರಳಿ ಈ ಆಟವನ್ನು ಆಡಿಸಲಾಗುತ್ತದೆ. ಹಟ ಹಿಡಿಯುವ, ಬಾಲಗ್ರಹ ಬಾಧಿಸಿರುವ ಮಕ್ಕಳನ್ನು ಬಸವನ ಪಾದದಡಿಗೆ ಹಾಕಿ ಅನುಗ್ರಹಿಸುವಂತೆ ಬೇಡಿಕೊಳ್ಳಲಾಗುತ್ತದೆ.

ಇನ್ನು ಪುಂಗಿ ಊದುತ್ತಾ ಹೋದಂತೆ ತೆರೆದ ಬುಟ್ಟಿಯಲ್ಲಿ ನಾಗರಹಾವು ಎಡೆ ಎತ್ತಿ, ಪುಂಗಿಯ ಚಲನೆಗೆ ಕುಣಿಯುವ ದೃಶ್ಯಕೌತುಕವನ್ನು ಸಂತೆಗಳು ನಮಗೆ ಉಣಬಡಿಸಿವೆ. ಹಾವಾಡಿಗರು ಹೊತ್ತು ತರುವ ಒಂದೆರಡು ಬುಟ್ಟಿಯೊಳಗೆ ಪಳಗಿಸಿದ ನಾಗರಹಾವುಗಳನ್ನು ಸಂತೆಯಂತಹ ಜನಸಂದಣಿ ಪ್ರದೇಶಗಳಿಗೆ ತಂದು ಕುಣಿಸುವ ಮೂಲಕ ತಮ್ಮ ಹೊಟ್ಟೆ ಹೊರೆಯುತ್ತಿದ್ದರು. ಈಗ ಉರಗಗಳನ್ನು ಸಾಕುವುದು, ಅವುಗಳನ್ನು ಬಳಸಿಕೊಳ್ಳುವುದು ಶಿಕ್ಷಾರ್ಹ ಅಪರಾಧ.

ಪುಂಗಿಯ ಸದ್ದಿಗೆ ಹಾವು ಕುಣಿಯುತ್ತದೆ ಎಂದು ಹಲವು ವರ್ಷಗಳ ಕಾಲ ನಂಬಿದ್ದ ನನಗೆ ಹಾವಿಗೆ ಕಿವಿ ಕೇಳಿಸುವುದಿಲ್ಲ. ಕಂಪನದ ಆಧಾರದಲ್ಲಿ ಅದು ತನ್ನ ಪರಿಸರವನ್ನು ಅರ್ಥಮಾಡಿಕೊಳ್ಳುತ್ತದೆ ಎಂದು ತಿಳಿದು ಚಕಿತ ಗೊಂಡಿದ್ದೆ. ಪುಂಗಿಯ ಚಲನೆಯೇ ಹಾವಿನ ನೃತ್ಯಕ್ಕೆ ಕಾರಣ ಎಂದು ಆಗ ಅರ್ಥವಾಗಿದ್ದು.

**‘ಬಾರೆ ಸಂತೆಗೆ ಹೋಗೋಣ ಬಾ**
**ಸಿನಿಮಾ ಟೆಂಟಲ್ಲಿ ಕೂರೋಣ ಬಾ**
**ಅಲ್ಲಿ ಮಬ್ಬಲ್ಲಿ ಸಿಗ್ಗಲ್ಲಿ**
**ಒನ್ ಬೈಟು ಸೀಟಲ್ಲಿ**
**ಮುತ್ತಿನ ಬೈಸ್ಕೋಪು ತೋರೆ ನೀರೆ’**

ಎಂಬ ‘ನೀನು ನಕ್ಕರೆ ಹಾಲು ಸಕ್ಕರೆ’ ಸಿನಿಮಾದ ಹಾಡಿನಲ್ಲಿ ವಿಷ್ಣುವರ್ಧನ್ ಮತ್ತು ವಿನಯಾ ಪ್ರಸಾದ್ ಅವರು ಜೊತೆಯಾಗಿ ಕುಣಿದ ಒಂದು ಡ್ಯುಯೆಟ್ ಹಾಡುನೃತ್ಯವಿದೆ. ಕೇಳಲು ಅಷ್ಟು ಚೆಂದ. ಪ್ರಣಯದ ಹಕ್ಕಿಗಳು ಸಂತೆಗೆ ಹೋಗೋದು ಯಾಕೆ ಎಂಬ ನವಿರಾದ ಅನುಭವವನ್ನು ಈ ಗೀತೆಯು ಮುಂದಿಡುತ್ತದೆ. ಸಂತೆಗೆ ಹೋಗಿ ಅಲ್ಲಿನ ಸಿನಿಮಾ ಟೆಂಟಲ್ಲಿ ಮಬ್ಬುಗತ್ತಲಲ್ಲಿ ಪ್ರಣಯದ ಉನ್ಮೇಷವನ್ನು ಪಡೆಯೋಣ ಎಂಬ ಈ ಗೀತೆಯಂತೆ ಹೆಚ್ಚಿನ ನವ ಜೋಡಿಹಕ್ಕಿಗಳು, ಕಾಲೇಜು ವಿದ್ಯಾರ್ಥಿಗಳು, ಯುವಕ- ಯುವತಿಯರು ಹೀಗೆ ಎಲ್ಲರಿಗೂ ಸಿನಿಮಾ ಟೆಂಟಿನಲ್ಲಿ ಹಾಕುವ ಸಿನಿಮಾಗಳೇ ಮನರಂಜನೆಯ, ತಮ್ಮ ಪ್ರೀತಿಯನ್ನು ಹಂಚಿಕೊಳ್ಳಲಿರುವ ರಹದಾರಿಯಾಗಿ ಕಾಣಿಸುತ್ತದೆ. ನಾನು ಕಣ್ಣು ಬಿಡುವ ಹೊತ್ತಿಗೆ ನಮ್ಮೂರಿನಲ್ಲಿ ಸಿನಿಮಾ ಟೆಂಟು ಮಾಯವಾಗಿತ್ತು. ಟಾಕೀಸು ಅದರ ಜಾಗದಲ್ಲಿ ವಿರಾಜಮಾನವಾಗಿತ್ತು. ತರಗತಿಗೆ ಬಂಕ್ ಮಾಡಿ ಸಿನಿಮಾಗೆ ಹೋಗಿದ್ದೇನೆಯೇ ವಿನಾ, ಪ್ರಣಯಿನಿಯ ಜೊತೆಯಲ್ಲಿ ಹೋಗುವ ಅವಕಾಶ ಇದುವರೆಗೂ ದೊರೆತಿಲ್ಲ. ಈಗ ಟಾಕೀಸು ಹೋಗಿ ಮಲ್ಟಿಪ್ಲೆಕ್ಸ್‌ಗೇ ಸಿನಿಮಾ ಚಲಿಸಿದೆ.

**‘ಹೂವನು ಮಾರುತ ಹೂವಾಡಗಿತ್ತಿ**
**ಹಾಡುತ ಬರುತಿಹಳು**
**ಘಮಘಮ ಹೂಗಳು ಬೇಕೇ ಎನ್ನುತ**
**ಹಾಡುತ ಬರುತಿಹಳು’**

ಎಂಬ ಪ್ರೊ. ಎಂ.ವಿ. ಸೀತಾರಾಮಯ್ಯ ಅವರ ಪದ್ಯದಂತೆ ನಮ್ಮೂರ ಸಂತೆಯಲ್ಲಿ ಹೂ ಮಾರುವವರಿಗೆ ಬರವಿಲ್ಲ. ಆದರೆ, ಹೂ ಮಾರುವವಳು ಎಂದೂ ಹಾಡಿದ್ದನ್ನು ನಾನು ಕಂಡಿಲ್ಲ. ಶಿವಮೊಗ್ಗದಿಂದ ರಾತ್ರಿ ಹತ್ತು ಗಂಟೆಗೆ ಮಡಿಕೇರಿ ಕಡೆಗೆ ಹೊರಡುವ ಕೆಂಪು ಬಸ್ಸು ಮುಂಜಾವಿನ ಮೂರೂಮುಕ್ಕಾಲಿನ ಹೊತ್ತಿಗೆ

